

ಬಗ್ಗೆ ಕೆಟ್ಟದ್ದಾಗಿ ಬರೆದರೂ ಅವನ ಮೈ ಮುಟ್ಟಲು ನನಗೆ ಸಾಧ್ಯವಾಗಲಿಲ್ಲ. ಅದು ಬೇಡ, ಅವನಿಗೆ ಕರೆ ಮಾಡುವ ಸಾಹಸವೂ ನಾನು ಮಾಡಿಲ್ಲ. ಈಗ ಅವನನ್ನು ಅವನ ಮನೆಯಲ್ಲಿ ಕೊಂದು ಹಾಕಲು ಸಾಧ್ಯವೆ? ನನ್ನ ಕಾಲ ಮುಗಿದಿದೆ ಎನಿಸುತ್ತದೆ. ನನ್ನ ಕಥೆಯ ಅಂತ್ಯ ನಾನೇ ಹಾಡಬೇಕು' ಎಂದು ದೃಢ ನಿಶ್ಚಯ ಮಾಡಿ ಡ್ರಾವರ್‌ನಲ್ಲಿದ್ದ ಪಿಸ್ತೂಲ್ ತೆಗೆದುಕೊಂಡು ಮಂಚದ ಮೇಲೆ ಒರಗಿದರು. ತಮ್ಮ ಬಲಗಡೆ ಪಿಸ್ತೂಲ್ ಮತ್ತು ಎಡಗಡೆ ಜೀವನ ಚರಿತ್ರೆ ಇಟ್ಟುಕೊಂಡು ಬದಕುಳಿಯಲು ಮಾರ್ಗಗಳು ಇವೆಯೆ ಎಂದು ಪರಿಶೀಲಿಸಿದರು. ಆದರೆ, ಅವರಿಗೆ ಈ ಸಂಕಷ್ಟದಿಂದ ಪಾರಾಗಲು ದಾರಿಗಳೇ ಕಾಣಲಿಲ್ಲ. ಜೀವನಚರಿತ್ರೆಯ ಕೊನೆಯ ಸಾಲುಗಳನ್ನು ಮತ್ತೆ ಓದಿದರು.

'ಅಧಿಕಾರಿಗಳು, ರಾಜಕಾರಣಿಗಳು ಏನೆಲ್ಲ ಖರೀದಿಸುವಂತೆ ಲೇಖರನ್ನೂ ಖರೀದಿಸುತ್ತಾರೆ. ತಮ್ಮನ್ನು ಮಾರಿಕೊಳ್ಳಲು ಲೇಖಕರು ಸಿದ್ಧರಿರುವಾಗ ಖರೀದಿಸುವ ಸಾಮರ್ಥ್ಯ ಇರುವ ಸ್ಥಿತಿವಂತರು, ಅಧಿಕಾರಿಗಳು ಮತ್ತು ರಾಜಕಾರಣಿಗಳು ಸುಮ್ಮನಿರುವರೆ? ಈ ಮಂತ್ರಿಗಳು ತಮ್ಮ ಜೀವನದಲ್ಲಿ ಒಂದೂ ಸಮಾಜಪರ, ನಾಡು-ನುಡಿಯ ಪರ ಕೆಲಸ ಮಾಡಿಲ್ಲ. ವ್ಯಾಪಕ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಸ್ವಜಾತಿ ಪಕ್ಷಪಾತ ಮಾಡಿದ್ದಲ್ಲದೆ ನಾಡು-ನುಡಿಗೆ ದ್ರೋಹ ಮಾಡಿರುತ್ತಾರೆ. ಅನೈತಿಕ ಕೆಲಸಗಳನ್ನೇ ಮಾಡಿಕೊಂಡು ಬಂದಿದ್ದಾರೆ. ಜೈಲಿನಲ್ಲಿ ಕೊಳೆಯಬೇಕಾದ ಈ ಕೊಳಕು ಮನುಷ್ಯನನ್ನು ನಾಯಕನಂತೆ ಈ ನಾಡಿನಲ್ಲಿ ಮೆರೆಯಿಸಿದ ಭ್ರಷ್ಟ ಲೇಖಕರಿಗೆ ಧಿಕ್ಕಾರ. ಈ ಜೀವನಚರಿತ್ರೆ ಈ ನಾಡಿನ ವಿದ್ವತ್ ವಲಯದಲ್ಲಿ ಹೊಸ ಇತಿಹಾಸ ಸೃಷ್ಟಿಸಬೇಕು, ಖೊಟ್ಟಿ ಸಾಹಿತಿಗಳ, ಖೊಟ್ಟಿ ರಾಜಕಾರಣಿ, ಅಧಿಕಾರಿಗಳ ನಿಜವಾದ ಮುಖ ಸಮಾಜಕ್ಕೆ ಗೊತ್ತಾಗಬೇಕು.'

ಈ ಸಾಲುಗಳು ಮಂತ್ರಿಗಳ ಮನಸ್ಸಿನ ಮೇಲೆ ದೊಡ್ಡ ಆಘಾತ ಉಂಟು ಮಾಡಿದವು. ಬೆಳಗಾಗಲು ಹೆಚ್ಚು ಸಮಯ ಬೇಕಿಲ್ಲ. ವೃಥಾ ಕಾಲಹರಣ ಸಲ್ಲದು ಎಂದುಕೊಂಡು ಟಿ.ವಿ. ಆನ್ ಮಾಡಿ, ಫ್ಯಾನಿನ ವೇಗ ಹೆಚ್ಚಿಸಿ ಎದೆಯ ಮೇಲೆ ಜೀವನಚರಿತ್ರೆ ಇಟ್ಟುಕೊಂಡು ಬಲಗೈಯಲ್ಲಿ ಪಿಸ್ತೂಲ್ ಹಿಡಿದು ತಮ್ಮ ಹಣೆಗೆ ಗುಂಡು ಹಾರಿಸಿಕೊಂಡು ಪ್ರಾಣ ಬಿಟ್ಟರು.

ಇಂದು ಬೆಳಗಿನ ಜಾವ ನಡೆದದ್ದು ಇಷ್ಟೇ.

* * *

ಕೋಣೆಯ ಪರೀಕ್ಷೆ ನಡೆಸಿದ ಪೊಲೀಸರಿಗೆ ಸಿಕ್ಕಿದ್ದು ಒಂದು ಪಿಸ್ತೂಲ್ ಮತ್ತು ಮಂತ್ರಿಗಳ ಶವದ ಎದೆಯ ಮೇಲಿದ್ದ ಜೀವನಚರಿತ್ರೆ. ಇದು ಆತ್ಮಹತ್ಯೆ ಎಂದು ಪೊಲೀಸರಿಗೆ ಸ್ಪಷ್ಟವಾಯಿತು. ಮಂತ್ರಿಗಳ ಸಾವಿಗೂ ಮತ್ತು ಜೀವನಚರಿತ್ರೆಗೂ ನೇರವಾದ ಸಂಬಂಧ ಇದೆಯೆಂದು ಅವರಿಗೆ ಸ್ಪಷ್ಟವಾಯಿತು. ಆದರೆ, ಈ ಸಂಬಂಧದ ಸೂಕ್ಷ್ಮತೆ ತಿಳಿಯುವ ಬುದ್ಧಿವಂತಿಕೆ ಅವರಿಗಿರಲಿಲ್ಲ.

ಮಂತ್ರಿಗಳ ಮಗ ಬಹಳ ಬುದ್ಧಿವಂತ. ಅವನು ಜೀವನಚರಿತ್ರೆಯ ಮೊದಲ ಮತ್ತು ಕೊನೆಯ ಪುಟ ಓದಿ ತನ್ನ ತಂದೆಯ ಸಾವಿನ ಹಿಂದಿರುವ ಕಾರಣ ತಿಳಿದುಕೊಂಡ. ಕೂಡಲೇ ಪ್ರಕಾಶಕರಿಗೆ ಕರೆ ಮಾಡಿ ಪುಸ್ತಕದ ಬಗೆಗೆ ವಿಷಯ ತಿಳಿದುಕೊಂಡ. ರಾತ್ರಿ ಪ್ರಕಾಶಕರ ಜೊತೆ ಮಂತ್ರಿಗಳು ನಡೆಸಿದ ಚರ್ಚೆಯ ಬಗೆಗೂ ಪ್ರಕಾಶಕರು ಮಂತ್ರಿಗಳ ಮಗನಿಗೆ ಹೇಳಿದರು. ಮಂತ್ರಿಗಳ ಮಗ ತನ್ನ ತಂದೆಯಿಂದ ರಾಜಕಾರಣದ ಅನೇಕ ವರಸೆಗಳನ್ನು ಕಲಿತುಕೊಂಡಿದ್ದ. ಸಾವಿನ ರಾಜಕಾರಣ ಹೇಗೆ ಮಾಡಬೇಕು ಎಂದು ಅವನಿಗೆ ಗೊತ್ತಿತ್ತು. ಈಗ ತಂದೆಯ ಸಾವಿನ ರಾಜಕಾರಣ ಮಾಡಲು ಮಗ ಮುಂದಾದ. ಹಿರಿಯ ಪೊಲೀಸ್ ಅಧಿಕಾರಿಯನ್ನು ಪಕ್ಕಕ್ಕೆ ಕರೆದುಕೊಂಡು ಹೋಗಿ, 'ಸರ್, ತಂದೆ ಸತ್ತು ಹೋಗಿದ್ದಾರೆ. ಏನು ಮಾಡಿದರೂ ಅವರ ಜೀವ ವಾಪಸ್ ಬರುವುದಿಲ್ಲ. ಚುನಾವಣೆಗಳು ಹತ್ತಿರ ಬಂದಿವೆ. ಈ ಜೀವನಚರಿತ್ರೆಯೇ ತಂದೆಯ ಸಾವಿಗೆ ಕಾರಣವಾಗಿದ್ದರೂ ಇದರ ಪ್ರಸಾರ ನಿಲ್ಲಿಸಲು ಸಾಧ್ಯವಿಲ್ಲ. ಈ ಪ್ರಕರಣ ನಮ್ಮ ಕುಟುಂಬದ ಗೌರವಕ್ಕೆ ಚ್ಯುತಿ ತರುತ್ತದೆ. ಆದರೆ, ಹೆಚ್ಚಿನ ಹಾನಿ ಆಗದಂತೆ ಏನು